**ದಿನಾಂಕಃ 20.02.2024 ರಂದು ಕರೆಯಿಸಿ ಪುನಃ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್ ಕೆ ರವರಿಂದ**

2 ನೇ ಪ್ರತಿವಾದಿ ನನ್ನ ಅತ್ತೆ. 1 ನೇ ಪ್ರತಿವಾದಿ ನನ್ನ ಗಂಡನ ಅಕ್ಕ. ದಾವಾ ಸ್ವತ್ತು ನನ್ನ ಗಂಡ ಖರೀದಿ ಮಾಡಿದ್ದು ನೋಂದಣಿ ಮಾಡುವ ಸಮಯದಲ್ಲಿ ನನ್ನ ಹೆಸರಿಗೆ ಮಾಡಿರುತ್ತಾರೆ. ಕ್ರಯದ ಕರಾರು ಒಪ್ಪಂದವು ನನ್ನ ಗಂಡನ ಹೆಸರಿನಲ್ಲಿ ಆಗಿದ್ದು ದಾವಾ ಸ್ವತ್ತಿ ಕ್ರಯ ಪತ್ರ ನನ್ನ ಹೆಸರಿನಲ್ಲಿ ಆಗಿರುತ್ತದೆ. ನನ್ನ ಗಂಡ ಕ್ರಯದ ಕರಾರನ್ನು ಮಾಡಿಕೊಂಡ ಬಗ್ಗೆ ದಾಖಲಾತಿ ನನ್ನ ಬಳಿ ಇರುವುದಿಲ್ಲ ಸಾಕ್ಷಿ ಮುಂದುವರೆದು ಈ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಈ ಬಗ್ಗೆ ದಿಃ 01.10.2009 ರಂದು ಕರಾರನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತನ್ನು ಈಶ್ವರ ಎನ್ನುವವರಿಂದ ಖರೀದಿ ಮಾಡಿರುತೆತೀವೆ ಎಂದರೆಸ ರಿ . ಈಶ್ವರ ಯವರಿಗೆ ಅಶ್ರಯ ಯೋಜನೆಯಲ್ಲಿ ದಾವಾ ಸ್ವತ್ತು ಬಂದಿರುತ್ತದೆಎಂದರೆ ಸರಿ. ಕರಾರನ್ನು ನನ್ನ ಗಂಡ ಯಾವ ದಿನಾಂಕದಂದು ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಕರಾರಿನ ಬಗೆಗ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿಯು ಈಶ್ವರರವರ ಬಳಿ ದಿಃ 01.10.2009 ಕ್ರಯ ಒಪ್ಪಂದ ಪತ್ರವನ್ನು ಮಾಡಿಕೊಂಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಸಮಯದಲ್ಲಿ ಸಾಲವನ್ನು ಮಾಡಿರುತ್ತೇನೆ ಎಂದು ನನಗೆ ಇಸವಿ ನೆನಪಿರುವುದಿಲ್ಲ ಸಾಕ್ಷಿ ಮುಂದುವರೆದು 2017 ರಲಿಲ ಸಾಲ ತೀರಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ಸಾಲವನ್ನು ನಾನು ಗಣಪತಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ನಲ್ಲಿ ಸಾಲವನ್ನು ಮಾಡಿರುತ್ತೇನೆ. ಬ್ಯಾಂಕಿಗೆ ಸಾಲವನ್ನು ಪಡೆಯವಾಗ ದಾವಾ ಸ್ವತ್ತನ್ನು ಅಡಮಾನ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ . ಸದರಿ ಅಡಮಾನಕ್ಕೆ ನನ್ನ ಅತ್ತೆಯೂ ಸಹ ಸಹಿಯನ್ನು ಹಾಕಿರುತ್ತಾರೆ. ಹಾಗೇ 1 ಪ್ರತಿವಾದಿ ಸಹ ಸಹಿಯನ್ನು ಹಾಕಿರುತ್ತಾರೆ. ಸದರಿ ಸಾಲದ ಅಕೌಂಟ್ ನಂಬರ್ ನನಗೆ ಈಗ ನೆನಪಾಗುತ್ತಿಲ್ಲ. ಸಾಲದ ಕಂತುಗಳನ್ನು ನಾನು ಸರಿಯಾಗಿ ಕಟ್ಟಿರುತ್ತೇನೆ. ಸರಿಯಾಗಿ ಸಾಲವನ್ನು ಕಟ್ಟುತ್ತಿಲ್ಲ ಎಂದು ನನಗೆ ನೋಟಿಸು ಬಂದಿರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು 2-3 ಸಲ ಬಂದಿರುತ್ತದೆ ಆದರೆ ಆನಂತರ ಕಟಿಟರುತ್ತೇನೆ ಎಂದು ಉತ್ತರಿಸುತ್ತಾರೆ. ನನ್ನ ಗಂಡ ಬಂಗಾರದ ಕೆಲಸ ಮಾಡುತ್ತಿದ್ದು ಅದರಿಂದ ಬಂದ ಹಣ ಹಾಗೂ ನನ್ನ ಟೈಲರಿಂಗ್ ಬಂದ ಹಣದಿಂದ ನಾನು ಸಾಲವನ್ನು ತೀರುವಳಿ ಮಾಡಿರುತ್ತೇನೆ. ನನ್ನ ಉಳಿತಾಯ ಖಾತೆ ಗಣಪತಿ ಬ್ಯಾಂಕ್ ಹಾಗೂ ಕೆನರಾ ಬ್ಯಾಂಕ್ ನಲ್ಲಿ ಇದೆ. ನನ್ನ ಬ್ಯಾಂಕ್ ಖಾತೆಗಳಿಗೆ ಸಂಬಂಧಪಟ್ಟ ಪಾಸ್ ಬುಕ್ ಅನ್ನು 1 ನೇ ಪ್ರತಿವಾದಿ ತೆಗೆದುಕೊಂಡು

ಹೋಗಿರುತ್ತಾರೆ. 1 ನೇ ಪ್ರತಿವಾದಿ ತೆಗೆದುಕೊಂಡು ಹೋಗಿರುತ್ತಾರೆ ಎಂದು ಆಕೆಯ ವಿರುದ್ಧ ಪೋಲಿಸರಿಗೆ ದೂರನ್ನು ನೀಡಿರುವುದಿಲ್ಲ . ನಾನು ಈ 2 ಬ್ಯಾಂಕ್ ಗಳಲ್ಲಿ ಡೂಪ್ಲಿಕೇಟ್ ಪಾಸ್ ಬುಕ್ ನೀಡಿ ಎಂದು ಅರ್ಜಿಯನ್ನು ನೀಡಿರುವುದಿಲ್ಲ.

ಗಣಪತಿ ಬ್ಯಾಂಕ್ ನಿಂದ 6 ಲಕ್ಷ ಸಾಲವನ್ನು ಪಡೆದುಕೊಂಡಿರುತ್ತೇನೆ. ಸಾಲಕ್ಕೆ ಎಷ್ಟು ಬಡ್ಡಿದರ ಹಾಕಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ಪಡೆದ ಸಾಲ ಸೂಸ್ತಿಯಾಗಿತ್ತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 2017 ರಲ್ಲಿ ಅದನ್ನು ತೀರಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಸಾಲವನ್ನು ತೀರಿಸುವ ಸಂದರ್ಭದಲ್ಲಿ 1 ನೇ ಪ್ರತಿವಾದಿಯು ನನ್ನ ಅಕೌಂಟ್ ಖಾತೆಗೆ ಅವರ ಅಕೌಂಟ್ನಿಂದ ಹಣವನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ . ಮೊದಲು ನಾನು ಹಾಗೂ 1 ಮತ್ತು 2 ನೇ ಪ್ರತಿವಾದಿಯವರು ಸಂಬಂಧದಲ್ಲಿ ಚೆನ್ನಾಗಿ ಇದ್ದೆವು ಎಂದರೆ ಸರಿ. ದಾವಾ ಸ್ವತ್ತಿನ ಮೇಲೆ ಸಾಲವನ್ನು ಮಾಡಿದ ಸಂದರ್ಭದಲ್ಲಿ ಪ್ರತಿವಾದಿಗಳೂ ಕೂಡ ಸದರಿ ಸಾಲದ ಪಕ್ಷಗಾರರು ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಾಲವನ್ನು ಪಡೆಯುವ ಸಂದರ್ಭದಲ್ಲಿ ದಾವಾ ಸ್ವತನ್ನು ನೋಂದಾಯಿತ ಮಾರ್ಟ್‌ಗೇಜ್ ಮಾಡಲಾಗಿತ್ತು ಎಂದರೆ ಸರಿ. ಸಾಕ್ಷಿಗೆ ನಿಪಿ 1 ಅನ್ನು ತೋರಿಸಲಾಗಿ ಸಾಕ್ಷಿ ನಾನು ನಿಪಿ 1 ಅನ್ನು 1 ನೇ ಪ್ರತಿವಾದಿಗೆ ಬರೆದುಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ 1 ರಲ್ಲಿ ಇರುವ 5 ಸಹಿಗಳನ್ನು ಸಾಕ್ಷಿ ನೋಡಿ ತನ್ನದೇ ಸಹಿ ಎಂದು ನುಡಿದಿರುತ್ತಾರೆ. ನಿಪಿ 2 ಅನ್ನು ತೋರಿಸಲಾಗಿ ದಾವಾ ಸ್ವತ್ತಿನ ಖಾತೆಯೂ ಈಗ 1 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿ ಇಲ್ಲ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. 1 ನೇ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿರುವುದು ತಪ್ಪು ಎಂದು ನಾನು ಎ.ಸಿ. ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲೀಸಿರುವುದಿಲ್ಲ . ನಿಪಿ 3 ನನ್ನ ಸಾಲದ ಖಾತೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದನ್ನು ನೋಡಿದರೆ ನನಗೆ ಅರ್ಥವಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ 3 ರಲ್ಲಿ ದಿಃ 16.06.2017 ರಲ್ಲಿ 1 ನೇ ಪ್ರತಿವಾದಿಯೂ ನನ್ನ ಖಾತೆಗೆ 40 ಸಾವಿರ ವರ್ಗಾವಣೆ ಮಾಡಿದ ಬಗ್ಗೆ ನಮೂದು ಇದೆ ಎಂದರೆ ಸರಿ . ನಿಪಿ 3 ರಲ್ಲಿ ದಿಃ 07.07.2017 ರಲ್ಲಿ 1 ನೇ ಪ್ರತಿವಾದಿಯೂ 18 ಸಾವಿರ ಹಣವನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿದ ಬಗ್ಗೆ ನಮೂದು ಇದೆ ಎಂದರೆ ಸರಿ. ನಿಪಿ 3 ರಲ್ಲಿ ದಿಃ 20.07.2017 ರಲ್ಲಿ 1 ನೇ ಪ್ರತಿವಾದಿಯೂ 20 ಸಾವಿರ ಹಣವನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿದ ಬಗ್ಗೆ ನಮೂದು ಇದೆ ಎಂದರೆ ಸರಿ. ನಿಪಿ 3 ರಲ್ಲಿ ದಿಃ 16.09.2017 ರಲ್ಲಿ 1 ನೇ ಪ್ರತಿವಾದಿಯೂ 44 ಸಾವಿರ ಹಣವನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿದ ಬಗ್ಗೆ ನಮೂದು ಇದೆ ಎಂದರೆ ಸರಿ.

ಕೆನರಾ ಬ್ಯಾಂಕ್  ಉಳಿತಾಯ ಖಾತೆಯ ಅಕೌಂಟ್ ನಂಬರ್ ಈಗ ನನಗೆ ನೆನಪಿರುವುದಿಲ್ಲ. ನನ್ನ ಖಾತೆ ಈಗ 3 ವರುಷ ಗಳ ಹಿಂದೆ ಮುಕ್ತಾಯಗೊಂಡಿರುತ್ತದೆ. ಕೆನರಾ ಬ್ಯಾಂಕ್ ಬಿ ಹೆಚ್ ಶಾಖೆಯಲ್ಲಿ ಖಾತೆ ಇತ್ತು. ಸದರಿ ಬ್ಯಾಂಕ್ ಖಾತೆಗೆ ನನ್ನ ಹೆಸರಿನ ಜೊತೆ ನನ್ನ ಗಂಡನ ಹೆಸರನ್ನು ನೀಡಿರುತ್ತೇನೆ. ಸಾಗರದ ವಿಳಾಸವನ್ನೆ ನಾನು ನೀಡಿದ್ದೆ.

**ಮುಂದುವರೆದ ಪಾಟೀ ಸವಾಲಿಗೆ  ಸಮಯಾವಕಾಶ ಕೋರಿದ್ದು ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು

ಮತ್ತು  ಜೆಎಂಎಫ್‌ಸಿ, ಸಾಗರ